ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ    ದಿನಾಂಕ : DATE : 13/09/2019

# ಡಿಕೆಶಿ ಇ.ಡಿ ಕಸ್ಟಡಿ ವಿಸ್ತರಣೆ?

## ಕೋರ್ಟ್‌ಗೆ ಇಡಿ ಪರ ವಕೀಲರಿಂದ ಮನವಿ ಸಾಧ್ಯತೆ

■ ರಾಘವ ಶರ್ಮ ನಿಡ್ಲೆ ನವದೆಹಲಿ

ಅಕ್ರಮ ಹಣ ಪತ್ತೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಡಿ.ಕೆ. ಶಿವಕುಮಾರ್ ಜಾರಿ ನಿರ್ದೇಶನಾಲಯದ 10 ದಿನಗಳ ಕಸ್ಟಡಿ ಪೂರ್ಣಗೊಳಿಸಿದ್ದು, ಶುಕ್ರವಾರ ಅವರ ಜಾಮೀನು ಅರ್ಜಿ ವಿಚಾರಣೆಗೆ ಬರಲಿದೆ. ಡಿಕೆಶಿ ಮಧ್ಯಾಹ್ನ 2 ಗಂಟೆಗೆ ಇ.ಡಿ. ವಿಶೇಷ ನ್ಯಾಯಾಲಯಕ್ಕೆ ಹಾಜರಾಗಲಿದ್ದು, ಇ.ಡಿ. ಅಧಿಕಾರಿಗಳು ಮತ್ತಷ್ಟು ದಿನ ಕಸ್ಟಡಿ ವಿಸ್ತರಣೆಗೆ ಮನವಿ ಮಾಡುವ ಸಾಧ್ಯತೆ ಇದೆ. ➲ ಪುಟ 2

### ಇಂದಿನ ಸಾಧ್ಯತೆಗಳೇನು

■ ಡಿಕೆಶಿ ಜಾಮೀನು ಅರ್ಜಿ ವಾದ-ಪ್ರತಿವಾದ ■ ಡಿಕೆಶಿ ಇಡಿ ಕಸ್ಟಡಿ ವಿಸ್ತರಣೆಗೆ ಇಡಿ ಮನವಿ ■ ಪ್ರಕರಣದಲ್ಲಿ ಇಡಿ ವ್ಯಾಪ್ತಿಗೆ ಬರದ ವಿಷಯಗಳ ಬಗ್ಗೆ ತನಿಖೆ ನಡೆಸಲು ಸಿಬಿಐ ಮುಂದಾಗಬಹುದು. ■ ಇಡಿ ಪರ ವಾದಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಜರಾಗುವ ಸಾಧ್ಯತೆ




ಗುರುವಾರ ದೆಹಲಿಯ ಇಡಿ ಕಚೇರಿಗೆ ವಿಚಾರಣೆಗಾಗಿ ಆಗಮಿಸಿದ ಡಿ.ಕೆ. ಶಿವಕುಮಾರ್, ಪುತ್ರಿ ಐಶ್ವರ್ಯಾ

### ಪುತ್ರಿ ಐಶ್ವರ್ಯಾ ವಿಚಾರಣೆ

108 ಕೋಟಿ ರೂ. ಬೇನಾಮಿ ಆಸ್ತಿ ಹೊಂದಿದ ಆರೋಪದಲ್ಲಿ ಡಿಕೆಶಿ ಪುತ್ರಿ ಐಶ್ವರ್ಯಾರನ್ನು ಇ.ಡಿ ಅಧಿಕಾರಿಗಳು ಶುಕ್ರವಾರ ವಿಚಾರಣೆ ನಡೆಸಿದ್ದಾರೆ. ಹಣದ ಮೂಲ, ಇದು ಎಲ್ಲಿಂದ ಬಂತು, ಇದು ತಂದೆಯವರಿಗೆ ಸೇರಿದ್ದರೆ ಅವರು ಈ ಹಣ ಸಂಪಾದಿಸಿದ್ದು ಹೇಗೆ ಇನ್ನಿತರ ಪ್ರಶ್ನೆಗಳನ್ನು ಇ.ಡಿ. ಅಧಿಕಾರಿಗಳು ಕೇಳಿದ್ದಾರೆ ಎನ್ನಲಾಗಿದೆ. ➲ ಪುಟ 2

---

ಮತ್ತಷ್ಟು ಮಾಹಿತಿ ಹೊರಕ್ಕೆ | ಜಾಮೀನಿಗೆ ಇಂದು ಆಕ್ಷೇಪಣೆ ಸಲ್ಲಿಕೆ

# ಡಿಕೆಶಿ ಇ.ಡಿ. ಕಸ್ಟಡಿ ವಿಸ್ತರಣೆ?

ಮೊದಲನೇ ಪುಟದಿಂದ... ವಿ. ವಾ. 13-9-19

ದೆಹಲಿಯ ಸಫ್ದರ್ ಜಂಗ್ ನಿವಾಸದಲ್ಲಿ ಪತ್ತೆಯಾದ 8.5 ಕೋಟಿ ರೂ.. ಹಣಕ್ಕೆ ಪ್ರಕರಣ ಸೀಮಿತವಾಗಿಲ್ಲ. ತನಿಖೆ ನಡೆಸಿದಷ್ಟೂ ಕೋಟಿಗಟ್ಟಲೆ ಅವ್ಯವಹಾರಗಳ ಮಾಹಿತಿಯನ್ನು ಇಡಿ ಅಧಿಕಾರಿಗಳು ಕಲೆ ಹಾಕಿರುವುದರಿಂದ ಹೆಚ್ಚುವರಿ ತನಿಖೆ ಸಲುವಾಗಿ ಶಿವಕುಮಾರ್‌ರನ್ನು ಮತ್ತಷ್ಟು ದಿನಗಳ ಕಾಲ ತಮ್ಮ ವಶದಲ್ಲಿ ಇರಿಸಿಕೊಳ್ಳಲು ಅವಕಾಶ ಕೊಡುವಂತೆ ನ್ಯಾಯಾಧೀಶ ಅಜಯ್‌ಕುಮಾರ್ ಕುಹರ್ ಅವರಲ್ಲಿ ಮನವಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಕಳೆದ ವಿಚಾರಣೆ ವೇಳೆ 14 ದಿನಗಳ ಕಸ್ಟಡಿಗೆ ಕೋರಿದ್ದ ಇ.ಡಿ ಅಧಿಕಾರಿಗಳಿಗೆ 10 ದಿನಗಳ ಕಾಲಾವಕಾಶವನ್ನು ನ್ಯಾಯಾಧೀಶರು ನೀಡಿದ್ದರು. ಶುಕ್ರವಾರದ ವಿಚಾರಣೆ ವೇಳೆ ಪ್ರಕರಣದ ಆಳ-ಅಗಲದ ಬಗ್ಗೆ ಇ.ಡಿ ವಕೀಲರು ಮತ್ತಷ್ಟು ಮಾಹಿತಿಯನ್ನು ನ್ಯಾಯಾಲಯದಲ್ಲಿ ಹಂಚಿಕೊಳ್ಳಲಿದ್ದು, ಮತ್ತೆ 14 ದಿನಗಳ ಕಸ್ಟಡಿ ಕೇಳಿದರೂ ಅಚ್ಚರಿ ಇಲ್ಲ ಎಂದು ವಕೀಲರೊಬ್ಬರು ಮಾಹಿತಿ ಹಂಚಿಕೊಂಡಿದ್ದಾರೆ.

» **ವಾದ-ಪ್ರತಿವಾದ ಸಾಧ್ಯತೆ**

ಡಿಕೆಶಿಗೆ ಜಾಮೀನು ನೀಡುವಂತೆ ವಕೀಲ ಅಭಿಷೇಕ್ ಮನು ಸಿಂಘ್ವಿ ಕಳೆದ ವಿಚಾರಣೆಯಲ್ಲೇ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಉತ್ತರ ನೀಡುವಂತೆ ನ್ಯಾಯಾಲಯ ಇ.ಡಿ ವಕೀಲರಿಗೆ ತಿಳಿಸಿತ್ತು. ಶುಕ್ರವಾರದ ವಿಚಾರಣೆ ವೇಳೆ ಜಾಮೀನಿಗೆ ಆಕ್ಷೇಪಣೆ ಸಲ್ಲಿಸುವಂತೆ ನ್ಯಾಯಾಧೀಶರು ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಇ.ಡಿ ಲಿಖಿತ ಆಕ್ಷೇಪಣೆ ಸಲ್ಲಿಸುವುದರ ಜತೆಗೆ ಜಾಮೀನು ಕುರಿತ ವಾದ-ಪ್ರತಿವಾದ ನಡೆಯುವ ಸಂಭವವಿದೆ. ಸಾಮಾನ್ಯವಾಗಿ ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಯ ಸಂಪೂರ್ಣ ವಿಚಾರಣೆಗೆ ಆರಂಭಿಕ ಹಂತದಲ್ಲೇ ಕೋರ್ಟ್ ಜಾಮೀನು ನೀಡುವುದು ಕಡಿಮೆ. ಹೀಗಾಗಿ, ಡಿಕೆಶಿ ಪ್ರಕರಣದಲ್ಲೂ ಇದೇ ಮುಂದುವರಿಯುವ ಲಕ್ಷಣಗಳಿವೆ.

ನಾವು ತಪ್ಪು ಮಾಡಿಲ್ಲ. ಹಾಗಾಗಿ ನಮ್ಮನ್ನು ಜೈಲಿಗೆ ಹಾಕಿದರೂ ಹೆದರುವ ಪ್ರಶ್ನೆಯೇ ಇಲ್ಲ. ಡಿ.ಕೆ. ಶಿವಕುಮಾರ್ ತಮ್ಮ ಕಚೇರಿಯಲ್ಲಿ ಹೇಗೆ ಕೂರುತ್ತಾರೋ ಹಾಗೆಯೇ ಇಡಿ ಕಚೇರಿಯಲ್ಲೂ ಕೂರುತ್ತಾರೆ. ಮೊದಲು ಹೇಗಿದ್ದರೋ ಈಗಲೂ ಹಾಗೆಯೇ ಇದ್ದಾರೆ. ಮುಂದೆಯೂ ಅದೇ ಶಿವಕುಮಾರ್‌ರನ್ನು ನೀವು ನೋಡುತ್ತೀರಿ.

| ಡಿ.ಕೆ. ಸುರೇಶ್ ಕಾಂಗ್ರೆಸ್ ಸಂಸದ

### ಇಡಿಯಿಂದ ಐಶ್ವರ್ಯಾ ವಿಚಾರಣೆ

ಮೊದಲನೇ ಪುಟದಿಂದ..

ಸೆ.11ರಂದು ವಿಚಾರಣೆಗೆ ಹಾಜರಾಗು ವಂತೆ ಐಶ್ವರ್ಯಾಗೆ ಇಡಿ ನೋಟಿಸ್ ಜಾರಿ ಮಾಡಿದ್ದ ಹಿನ್ನೆಲೆಯಲ್ಲಿ ಬುಧವಾರವೇ ಅವರು ದೆಹಲಿಗೆ ಬಂದು ವಕೀಲರೊಂದಿಗೆ ಮಾತುಕತೆ ನಡೆಸಿದ್ದರು. ಗುರುವಾರ ಇ.ಡಿ ಪ್ರಧಾನ ಕಚೇರಿಗೆ 11 ಗಂಟೆಗೆ ಆಗಮಿಸಿದರಾದರೂ ಮಧ್ಯಾಹ್ನ 2.30ರ ತನಕ ಅಧಿಕಾರಿಗಳು ವಿಚಾರಣೆಗೆ ಕರೆದಿರಲಿಲ್ಲ. ಸಂಬಂಧಿಕರೊಂದಿಗೆ ಬಂದಿದ್ದ ಐಶ್ವರ್ಯಾ ಜೊತೆ 2.30ರ ತನಕ ಸಂಸದ ಡಿ.ಕೆ . ಸುರೇಶ್ ಇದ್ದರು. **ಇಂದೂ ವಿಚಾರಣೆ:** ಶುಕ್ರವಾರ ಮತ್ತೆ ವಿಚಾರಣೆ ಹಾಜರಾಗು ವಂತೆ ಇಡಿ ಅಧಿಕಾರಿಗಳು ಡಿಕೆಶಿ ಪುತ್ರಿಗೆ ಸೂಚನೆ ನೀಡಿದ್ದಾರೆ.

ಒಕ್ಕಲಿಗರು ಡಿ.ಕೆ.ಶಿವಕುಮಾರ್ ಬೆಂಬಲಿಸಿ ನಡೆಸಿದ ಪ್ರತಿಭಟನಾ ಸಭೆಗೆ ನನ್ನನ್ನು ಆಹ್ವಾನಿಸಿರಲಿಲ್ಲ. ಹೀಗಾಗಿ ಪಾಲ್ಗೊಳ್ಳುವ ಪ್ರಶ್ನೆ ಬರಲಿಲ್ಲ. ಡಿಕೆಶಿ ವಿರುದ್ಧ ತನಿಖೆ ತಪ್ಪಲ್ಲ. ಆದರೆ, ಬಂಧಿಸುವ ಅಗತ್ಯವಿರಲಿಲ್ಲ. ಅವರು ತನಿಖೆಗೆ ಸಂಪೂರ್ಣ ಸಹಕಾರ ನೀಡಿದ್ದಾರೆ.

| ಸಿದ್ದರಾಮಯ್ಯ ಮಾಜಿ ಮುಖ್ಯಮಂತ್ರಿ